# ಶಾರದಾ-ರಾಮಕೃಷ್ಣ

ಪಿ. ಮೀನಾ

*ಶ್ರೀರಾಮಕೃಷ್ಣರು ಮತ್ತು ಶ್ರೀಶಾರದಾದೇವಿಯವರ ಸಂಬಂಧದಲ್ಲಿ ಅಲೌಕಿಕತೆ ಮತ್ತು ಮಾನವೀಯತೆ ಎರಡೂ ಸಾಮರಸ್ಯಗೊಂಡಿವೆ. ಈ ಅಪೂರ್ವ ಸಂಬಂಧವನ್ನು ಕುರಿತ ಈ ಲೇಖನವನ್ನು ಬರೆದಿರುವ ಕುಮಾರಿ ಮೀನಾ ಅವರು ಬೆಂಗಳೂರು ರಾಮಕೃಷ್ಣ ಮಠದ ಭಕ್ತರು.*

**ಈ** ಲೋಕದಲ್ಲಿ ನಾವು ಅನೇಕ ಅದ್ಭುತ ವಸ್ತುಗಳನ್ನು ನೋಡುತ್ತೇವೆ—ತುಷಾರಧವಲ ಹಿಮಾಲಯ, ಪರಮಪೂತ ಗಂಗಾಸ್ರೋತ, ನಿರುಪಮ ಸಾಗರ, ಅನಂತ ನೀಲಾಕಾಶ, ಸಸ್ಯ ಶ್ಯಾಮಲ ಪ್ರಕೃತಿ ಮಾತೆ, ತೇಜೋಮಯನಾದ ದಿನಕರ, ಇವನ್ನೆಲ್ಲಾ ಕಂಡು ಮುಗ್ಧರಾಗಿ ವರ್ಣನೆ ಮಾಡಲು ಕೀರ್ತಿಸಲು ಪ್ರಯತ್ನಿಸುತ್ತೇವೆ—ಎಲ್ಲೋ ಒಂದಿಷ್ಟು ಮಾಡಿ ಸಂತುಷ್ಟರಾಗುತ್ತೇವೆ. ಇನ್ನು **ಏಕಾಂಶೇನ ಸ್ಥಿತೋ ಜಗತ್** ಎನ್ನುತ್ತಾ ತನ್ನ ಏಕಾಂಶದಿಂದಲೇ ಇಡೀ ಜಗತ್ತನ್ನು ಧರಿಸಿರುವ ಶ್ರೀಭಗವಂತನ ಕೀರ್ತನೆ ವರ್ಣನೆ ಅಸಾಧ್ಯ! ಸ್ವಾಮಿ ವಿವೇಕಾನಂದರು ಒಂದೆಡೆ ಹೇಳುತ್ತಾರೆ, "ನಾನು ಇಡೀ ಜೀವನ ಈ ಅದ್ಭುತ ಶಾರದಾ-ರಾಮಕೃಷ್ಣ ಚರಿತ್ರೆಯನ್ನು ಕಂಡು ಧ್ಯಾನಿಸಿದರೂ ಅದರ ಶತಾಂಶದಲ್ಲಿ ಏಕಾಂಶವನ್ನೂ ಇನ್ನೂ ಅರಿತಿಲ್ಲ" ಎಂದು. ಆದರೂ ಈ ಅಸಾಧ್ಯವಾದದ್ದನ್ನು ಒಂದಿಷ್ಟು ಮಾಡಿಯೇ ಪವಿತ್ರರೂ ಧನ್ಯರೂ ಆಗುತ್ತೇವೆ. ಶ್ರೀ ಮಹೇಂದ್ರನಾಥದತ್ತರು ಸ್ವಾಮಿ ವಿವೇಕಾನಂದರ ಸಹೋದರರೂ ಸಾಧುಚರಿತ್ರರೂ ಶಾರದಾ-ರಾಮಕೃಷ್ಣ ಸಾನ್ನಿಧ್ಯ ಪಡೆದ ಪುಣ್ಯಶಾಲಿಗಳೂ ಹೌದು. ಅವರು ಓರ್ವ ಭಕ್ತರ ಪ್ರಶ್ನೆಗೆ ಉತ್ತರವಾಗಿ ಶಾರದಾ-ರಾಮಕೃಷ್ಣರ ಬಗೆಗೆ ಈ ರೀತಿ ಹೇಳುತ್ತಾರೆ "ಶ್ರೀರಾಮಕೃಷ್ಣರು ಸ್ವಲ್ಪ ವ್ಯಕ್ತವಾಗಿದ್ದರು. ಮಿಕ್ಕದ್ದು ಅವ್ಯಕ್ತ. ಶ್ರೀಮಾತೆಯವರಾದರೋ ಪೂರ್ಣ ಅವ್ಯಕ್ತ. ಶಾರದಾದೇವಿಯವರು ವಾಕ್ಯಾತೀತರೂ, ಭಾವಾತೀತರೂ, ಒಟ್ಟುಗೂಡಿದ ಮಹಾಶಕ್ತಿ."

ಶ್ರೀಮಾತೆ ಶಾರದಾದೇವಿಯವರು ತಮ್ಮ ದಿವ್ಯಪತಿ ಶ್ರೀರಾಮಕೃಷ್ಣರನ್ನು ಪೂರ್ಣಬ್ರಹ್ಮಸನಾತನರಂತೆ ಕಾಣುತ್ತಿದ್ದರು. ಅವರಿಗೆ ಶ್ರೀರಾಮಕೃಷ್ಣರು ಸರ್ವದೇವದೇವೀ ಸ್ವರೂಪರಾಗಿಯೂ, ಜಗದೀಶ್ವರರಾಗಿಯೂ ಇದ್ದರು. ದಕ್ಷಿಣೇಶ್ವರದಲ್ಲಿ ಹೃದಯರಾಮ ಶಾರದಾದೇವಿಯವರನ್ನು ಪ್ರಶ್ನಿಸುತ್ತಾನೆ, "ಅತ್ತೆ, ನೀವು ಮಾವನನ್ನು ತಂದೆ ಎಂದೇಕೆ ಕರೆಯಬಾರದು?" ಅದಕ್ಕೆ ಶ್ರೀಮಾತೆಯವರು ಸಂಭ್ರಮದಿಂದ "ಅವರು ಕೇವಲ ನನಗೆ ತಂದೆ ಏಕೆ? ಅವರು ನನ್ನ ತಾಯಿ, ತಂದೆ, ಬಂಧು, ಭಗಿನಿ, ಸರ್ವಸ್ವವೂ ಆಗಿದ್ದಾರೆ" ಎಂದು ನುಡಿದರು.



ಶ್ರೀರಾಮಕೃಷ್ಣರು ಮತ್ತು ನನ್ನ ನಡುವೆ ಯಾವುದೇ ಭೇದವನ್ನು ಮಾಡಬೇಡ. —ಶ್ರೀಶಾರದಾದೇವಿ

## ಶಾರದಾ-ರಾಮಕೃಷ್ಣರ ದಿವ್ಯ ಜೀವನ

ಶಾರದಾದೇವಿಯವರು ಕೇವಲ ೫ ವರ್ಷದ ಬಾಲಕಿಯಾಗಿದ್ದಾಗ ಶ್ರೀರಾಮಕೃಷ್ಣರು ಆಕೆಯ ಪಾಣಿಗ್ರಹಣ ಮಾಡಿದರು. ಅವರೀರ್ವರ ದಿವ್ಯ ದಾಂಪತ್ಯಜೀವನ ಇಡೀ ಮನುಕುಲಕ್ಕೇ ಒಂದು ಹೊಸ ದಾರಿದೀಪವಾಗಿ ಸನಾತನ ಋಷಿಜೀವನದ ಆದರ್ಶವನ್ನು ಮತ್ತೆ ಸ್ಥಾಪಿಸುವುದಕ್ಕೇ ಆಗಿದೆ. ಪತಿಪತ್ನಿಯರಿಬ್ಬರು ಸತ್ಯಸಾಕ್ಷಾತ್ಕಾರಕ್ಕಾಗಿ, ಇತರರ ಮಂಗಲಕ್ಕಾಗಿ ಜೀವನ ಮಾಡುವುದು. ಶಾರದಾ-ರಾಮಕೃಷ್ಣರಾದರೋ ಇಡೀ ಲೋಕದ ಆಧ್ಯಾತ್ಮಿಕ ಔನ್ನತ್ಯವನ್ನು ಜಾಗ್ರತಗೊಳಿಸುವ ಮಹಾನ್ ವ್ರತಧಾರಿಗಳಾಗಿದ್ದರು. ತರುಣಿ ಶಾರದೆ ಶ್ರೀರಾಮಕೃಷ್ಣರ, "ನೀನು ನನ್ನನ್ನು ಸಂಸಾರಪಥಕ್ಕೆ ಎಳೆಯಲು ಬಂದೆಯಾ?" ಎಂಬ ಪ್ರಶ್ನೆಗೆ "ಇಲ್ಲ, ನಾನು ನಿಮ್ಮ ಇಷ್ಟಪಥದಲ್ಲಿ ಸಹಾಯ ಮಾಡಲು ಬಂದಿರುವೆ" ಎಂದು ಉತ್ತರಿಸುತ್ತಾರೆ. ಶ್ರೀರಾಮಕೃಷ್ಣರ ಇಷ್ಟಪಥ ಎಲ್ಲರ ಆಧ್ಯಾತ್ಮಿಕ ಜಾಗೃತಿ.

ಸತ್ಯವಾಗಿಯೂ ಶ್ರೀಮಾತೆಯವರು ಇದರಲ್ಲಿ ಪೂರ್ಣಭಾವದಲ್ಲಿ ಸಹಕರಿಸುತ್ತಾರೆ. ಶ್ರೀರಾಮಕೃಷ್ಣರ ಯಥಾರ್ಥ ಸಹಧರ್ಮಿಣಿಯಾಗಲು ಶ್ರೀಮಾತೆಯವರು ಶ್ರೀರಾಮಕೃಷ್ಣರನ್ನು ಸರ್ವಭಾವದಿಂದಲೂ ಅನುಸರಿಸಿದರು. ಶ್ರೀರಾಮಕೃಷ್ಣರೂ ಶ್ರೀಮಾತೆಯವರ ಈ ಹಕ್ಕನ್ನು ಅತ್ಯಂತ ಪ್ರೀತಿಯಿಂದ ಗೌರವಿಸುತ್ತಾರೆ. ಇದರಿಂದ ಜಗತ್ತಿಗೆ "ನಾರಿ ಅಮೃತಪಥದ ದ್ವಾರ" ಎಂಬ ಹೊಸ ಸತ್ಯದ ಪರಿಚಯವಾಯಿತು. ಅಪೂರ್ವ ದಾಂಪತ್ಯ ಪ್ರೇಮದ ಆದರ್ಶವನ್ನು ಸಮಾಜದ ಮುಂದೆ ಎತ್ತಿಹಿಡಿದರು. ಅವರೀರ್ವರ ದಿವ್ಯ ಜೀವನ ಈ ಯುಗದ ಇತಿಹಾಸದ ಪರಮಾಶ್ಚರ್ಯ! ಅವರಿಬ್ಬರ ದಿವ್ಯ ಸಂಬಂಧ ವಾಸ್ತವವಾಗಿಯೂ ವಿಚಿತ್ರವೂ ಮಧುರವೂ ಆಗಿತ್ತು! "ನನ್ನನ್ನು ನೀವು ಯಾವ ರೀತಿ ನೋಡುತ್ತೀರಿ?" ಎಂಬ ಶ್ರೀಮಾತೆಯವರ ಪ್ರಶ್ನೆಗೆ ಶ್ರೀರಾಮಕೃಷ್ಣರು "ಸಾಕ್ಷಾತ್ ಭಗವತಿಯ ಹಾಗೆ" ಎನ್ನುತ್ತಾರೆ.

ಡಾ. ಆರ್. ಬಿ. ರುಬಕೋವ್ ಓರ್ವ ಬುದ್ಧಿಶಾಲಿಗಳೂ, ಮನನಶೀಲರೂ, ವೈಜ್ಞಾನಿಕ ಮನೋಭಾವದವರೂ ಹಾಗೂ ಮಾರ್ಕ್ಸಿಸ್ಟ್‌ರೂ ವೇದಾಂತತಜ್ಞರೂ ಆಗಿದ್ದರು. ಅವರು ಶ್ರೀರಾಮಕೃಷ್ಣರ ಜೀವನ ಬರೆಯಲು ಉದ್ದೇಶಿಸಿದಾಗ ಅದರಲ್ಲಿ ಹೆಚ್ಚಿನ ಭಾಗ ಶ್ರೀಶಾರದಾದೇವಿಯವರಿಗೆ ಮೀಸಲಿರಿಸಲು ಇಚ್ಛಿಸಿದರು. ಇದಕ್ಕೆ ಕಾರಣವನ್ನು ಕೇಳಲು ಅವರು ರಾಮಕೃಷ್ಣ ಮಠದ ಸಾಧುಗಳೊಬ್ಬರಿಗೆ ಈ ರೀತಿ ಹೇಳುತ್ತಾರೆ : "ಈಗ ನನಗೆ ಶ್ರೀರಾಮಕೃಷ್ಣರ ಪುಸ್ತಕದ ಬಗೆಗೆ ಒಂದು ನಿರ್ದಿಷ್ಟ ಭಾವನೆ ಬರುತ್ತಿದೆ. ಈ ಪುಸ್ತಕವನ್ನು ಹೆಚ್ಚು ಶಾರದಾದೇವಿಯವರ ವಿಚಾರದಿಂದ ಪ್ರಾರಂಭಮಾಡಲು ಇಚ್ಛಿಸುವೆ. ಏಕೆಂದರೆ ನನಗೆ ಆಕೆ ಶ್ರೀರಾಮಕೃಷ್ಣರ ಮಹೋನ್ನತ ಕೊಡುಗೆ ಅಥವಾ ಸಿದ್ಧಿಗಳಲ್ಲಿ ಒಬ್ಬರಾಗಿ ಕಾಣುತ್ತಾರೆ. ಅಷ್ಟೇ ಅಲ್ಲ, ಶ್ರೀಶಾರದಾದೇವಿಯವರು ಶ್ರೀರಾಮಕೃಷ್ಣರ ಸರ್ವೋತ್ಕೃಷ್ಟ ಕೊಡುಗೆ ಅಥವಾ ಸಿದ್ಧಿ ಎಂದು ಬಗೆಯುತ್ತೇನೆ. ಆಕೆ ಓರ್ವ ಅತ್ಯಂತ ಸಾಧಾರಣ ಗ್ರಾಮದ ಬಾಲೆ. ಆಕೆಯನ್ನು ನಿರುಪಮವಾದ ವ್ಯಕ್ತಿಯನ್ನಾಗಿ ಮಾಡಿದರು ಶ್ರೀರಾಮಕೃಷ್ಣರು. ನನಗೆ ಶ್ರೀಮಾತೆಯವರೇ ಭಾರತದ ಪ್ರತೀಕ. ಆಕೆ ದಿವ್ಯ ಆದರೂ ಮಾನವೀಯ, ನಿಜವಾದ ಸ್ತ್ರೀ ಆದರೂ ಪೂರ್ಣ ಸಂತಳು. ಆ ತಾಯಿ ನನಗೆ ಬಹುವಾಗಿ ಮೆಚ್ಚಿಗೆಯಾಗಿದ್ದಾರೆ. ಆಕೆ ಎಷ್ಟೊಂದು ನಮ್ರರಾಗಿದ್ದರೆಂದರೆ ಅವರ ಜೀವಿತಕಾಲದಲ್ಲಿ ಎಲ್ಲೋ ಕೆಲವರು ಅವರನ್ನು ಅರಿತಿದ್ದರು. ನನ್ನ ಅಭಿಪ್ರಾಯದಲ್ಲಿ ಆಕೆಯೇ ಸ್ವಾಮಿ ವಿವೇಕಾನಂದರ ಹಿಂದಿದ್ದ ಶಕ್ತಿ ಮತ್ತು ಸ್ಫೂರ್ತಿ."

## ಶಾರದಾ-ರಾಮಕೃಷ್ಣರ ಮಾನವೀಯ ಸಂಬಂಧ

ಶ್ರೀರಾಮಕೃಷ್ಣರು ಸದಾ ಪರಬ್ರಹ್ಮದಲ್ಲಿ ಲೀನವಾದ ಮನಸ್ಸುಳ್ಳವರಾದರೂ ಶಾರದಾದೇವಿಯವರ ಆರೋಗ್ಯದ ಕಡೆ, ಅವರ ಲೌಕಿಕ ಮತ್ತು ಪಾರಮಾರ್ಥಿಕ ವಿದ್ಯೆಯ ಕಡೆ ಹೆಚ್ಚಿನ ಗಮನ ನೀಡುತ್ತಿದ್ದರು. ದೀಪದ ಬತ್ತಿ ಹೇಗೆ ತಯಾರುಮಾಡುವುದು, ಪ್ರಯಾಣದ ಸಂದರ್ಭದಲ್ಲಿ ಹೇಗೆ ವಸ್ತುಗಳ ಬಗ್ಗೆ ಎಚ್ಚರಿಕೆ ವಹಿಸಬೇಕು, ಮನೆಯಲ್ಲಿ ಇರುವವರೊಂದಿಗೆ ಯಾವ ರೀತಿ ವ್ಯವಹರಿಸಬೇಕು, ಭಕ್ತಾದಿಗಳನ್ನು ಯಾವ ರೀತಿ ನೋಡಿಕೊಳ್ಳಬೇಕು ಇತ್ಯಾದಿ ವಿಷಯಗಳನ್ನು ತಿಳಿಸುತ್ತಿದ್ದರು. ನಹಬತ್ತಿನ ನಾಲ್ಕು ಗೋಡೆಯ ಮಧ್ಯೆ ಸದಾ ಇದ್ದರೆ ಸರಿಯಲ್ಲವೆಂದು ಯಾರೂ ಇಲ್ಲದ ಸಮಯದಲ್ಲಿ ಸುತ್ತಾಡಿ ಬರಲು ಹೇಳುತ್ತಿದ್ದರು. ಸ್ತ್ರೀಯರಿಗೆ ಲಜ್ಜೆಯೇ ಭೂಷಣವೆಂದು ಅದನ್ನು ಪೂರ್ಣರೂಪದಲ್ಲಿ ಲಕ್ಷ್ಯದಲ್ಲಿಡಬೇಕೆಂದು ಶ್ರೀಮಾತೆಯವರನ್ನು ಪ್ರೋತ್ಸಾಹಿಸುತ್ತಿದ್ದರು. ಒಮ್ಮೆ ದಕ್ಷಿಣೇಶ್ವರದಲ್ಲಿ ಶ್ರೀಮಾತೆಯವರಿದ್ದಾಗ ಅವರಿಗೆ ತಲೆಯ ನೋವಾಗಲು ರಾಮಲಾಲನನ್ನು ಕುರಿತು "ಹೇ ರಾಮಲಾಲ, ಆಕೆಗೆ ತಲೆ ನೋವು ಏಕಾಯಿತು?"ಎಂದು ಕಾತರತೆಯಿಂದ ಪ್ರಶ್ನೆ ಮಾಡಿದ್ದರು. ಶ್ರೀಮಾತೆಯವರಿಗೆ ಚಿನ್ನದ ಒಡವೆ ಮಾಡಿಸಿಕೊಡುತ್ತಾರೆ. ಶ್ರೀಮಾತೆಯವರು ತಯಾರಿಸಿದ ಹೂವಿನಮಾಲೆಯನ್ನು ಮೆಚ್ಚುತ್ತಾರೆ. ಅವರು ಮೆಲುದನಿಯಲ್ಲಿ ಹಾಡುತ್ತಿದ್ದುದನ್ನು ಕಂಡು ಸಂತೋಷಪಡುತ್ತಾರೆ. ಮನೆಯ ಕೆಲಸಕ್ಕೆ ನೆರವಾಗಲೆಂದು ತಮ್ಮ ಪರಿಶುದ್ಧ ಹೃದಯದ ಶಿಷ್ಯನಾದ ಲಾಟುವನ್ನು ಶ್ರೀಮಾತೆಯವರೆಡೆಗೆ ಕಳುಹಿಸುತ್ತಾರೆ. ಶ್ರೀಮಾತೆಯವರಿಗೆ ಸಂತೋಷ ಉಂಟುಮಾಡಲು ಸ್ವಲ್ಪ ಸಮಯ ಮಾಡಿಕೊಂಡು ನಹಬತ್ತಿಗೆ ಹೋಗಿ ಮಾತನಾಡಿಸಿ ಬರುತ್ತಾರೆ. ಮುಂದೆ ತಮ್ಮ ನಿರ್ಯಾಣದ ನಂತರ ಶ್ರೀಮಾತೆಯವರಿಗೆ ಹಣದ ಬಿಕ್ಕಟ್ಟು ಬರದಿರಲಿ ಎಂದು ಸ್ವಲ್ಪ ಹಣವನ್ನು ಬಡ್ಡಿಗಾಗಿ ಬಲರಾಮಬಸುವಿನ ಬಳಿ ಇಡುತ್ತಾರೆ. ಶ್ರೀಮಾತೆಯವರನ್ನು ಎಂದೂ ಏಕವಚನದಲ್ಲಿ ಕರೆಯುತ್ತಿರಲಿಲ್ಲ.

> ಶ್ರೀರಾಮಕೃಷ್ಣರ ಸೇವೆಯಲ್ಲಿ ಯಾವ ಕೆಲಸವೂ ನನಗೆ ಕಷ್ಟವೆನಿಸುತ್ತಿರಲಿಲ್ಲ. ಅತ್ಯಾನಂದದಲ್ಲಿ ದಿನಗಳು ಕಳೆದದ್ದೇ ತಿಳಿಯುತ್ತಿರಲಿಲ್ಲ. —*ಶ್ರೀಶಾರದಾದೇವಿ*

ಇತ್ತಕಡೆ ಹಳ್ಳಿಯ ಜನ ಶ್ರೀರಾಮಕೃಷ್ಣರನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಾರದೆ ಅವರನ್ನು ಹುಚ್ಚರೆಂದು ಕರೆಯಲು ಸತಿ ಶಾರದೆ ತಮ್ಮ ಪತಿಯನ್ನು ಕಾಣುವ ಕಾತರತೆಯಿಂದ ೬೩ ಮೈಲಿ ದೂರ ನಡೆದು ದಕ್ಷಿಣೇಶ್ವರಕ್ಕೆ ಬರುತ್ತಾರೆ. ಅಲ್ಲಿ ತಮ್ಮ ದಿವ್ಯ ಪತಿ ಎಂದಿನಂತೆ ಹಸನ್ಮುಖರಾಗಿರುವುದನ್ನು ಕಂಡು ಸಮಾಧಾನಗೊಂಡು ಅವರ ಹಾಗೂ ಅವರ ತಾಯಿಯ ಸೇವೆಯನ್ನು ಮಾಡಲು ಸ್ಥಿರಸಂಕಲ್ಪರಾಗುತ್ತಾರೆ. ಶ್ರೀರಾಮಕೃಷ್ಣರ ಅತೀವ ಸೂಕ್ಷ್ಮದೇಹಕ್ಕೆ ಸರಿಯಾದ ಆಹಾರ ತಯಾರಿಸಿ, ಸದಾ ಆಧ್ಯಾತ್ಮಿಕ ಸ್ತರಗಳಲ್ಲಿ ನೆಲೆಸಿದ್ದ ಅವರ ಮನವನ್ನು ಒಳ್ಳೆಯ ಮಾತಿನಿಂದ ಕೆಳಗಿಳಿಸಿ, ಮಕ್ಕಳನ್ನು ಆರೈಕೆ ಮಾಡುವಂತೆ ವಾತ್ಸಲ್ಯದಿಂದ ಉಣಬಡಿಸುತ್ತಿದ್ದರು. ತಮ್ಮ ದೇವಶರೀರದ ಪೋಷಣೆಗಾಗಿ ಶ್ರೀರಾಮಕೃಷ್ಣರು ಪೂರ್ಣವಾಗಿ ಶ್ರೀಮಾತೆಯವರನ್ನೇ

ಅವಲಂಬಿಸಿದ್ದರು. ಶ್ರೀಮಾತೆಯವರಿಗೆ ಶ್ರೀರಾಮಕೃಷ್ಣರ ಸೇವೆ ಎಂದರೆ, ಶ್ರೀರಾಮಕೃಷ್ಣರ, ಅವರ ತಾಯಿಯ, ಶ್ರೀರಾಮಕೃಷ್ಣರನ್ನು ಹುಡುಕಿಕೊಂಡು ಬರುತ್ತಿದ್ದ ಅಸಂಖ್ಯ ಶಿಷ್ಯರ ಸೇವೆಯೂ ಆಗಿತ್ತು. ಅವರೆಲ್ಲರ ದೈಹಿಕ, ಮಾನಸಿಕ, ನೈತಿಕ, ಆಧ್ಯಾತ್ಮಿಕ ಬೆಳವಣಿಗೆಯ ಕಡೆಗೆ ಶ್ರೀಮಾತೆಯವರು ಗಮನವೀಯುತ್ತಿದ್ದರು. ಕೆಲವೊಮ್ಮೆ ಭಕ್ತರು ಹೆಚ್ಚಾಗಿ ಸೇರುತ್ತಿದ್ದ ಕಾರಣ ಶ್ರೀಮಾತೆಯವರಿಗೆ ಶ್ರೀರಾಮಕೃಷ್ಣರ ದರ್ಶನ ಹಲವು ತಿಂಗಳಾದರೂ ಆಗುತ್ತಿರಲಿಲ್ಲ. ಆಗ ತಮ್ಮ ಮನಸ್ಸಿಗೆ ಈ ರೀತಿ ಸಮಾಧಾನ ಮಾಡಿಕೊಳ್ಳುತ್ತಿದ್ದರು, "ಆಹಾ! ಪ್ರತಿದಿನ ಅವರ ದರ್ಶನ ಮಾಡಲು ನೀನು ಅಷ್ಟೊಂದು ಪುಣ್ಯ ಮಾಡಿರುವೆಯಾ?"ಎಂದು.

ಶ್ರೀಮಾತೆಯವರ ಸೋದರಸೊಸೆ ರಾಧು ತನ್ನ ಪತಿ ಮನ್ಮಥನೊಡನೆ ಜಗಳವಾಡಿದಳು. ಒಬ್ಬರೊನ್ನೊಬ್ಬರು ಹೊಡೆದರು. ಆಗ ಶ್ರೀಮಾತೆಯವರು ತಪ್ಪು ಮನ್ಮಥನದೇ ಎಂದುಕೊಂಡಿದ್ದರು. ಆದರೆ ಅಲ್ಲಿದ್ದ ಭಕ್ತರೊಬ್ಬರು, "ಅಮ್ಮಾ, ಇಲ್ಲ ಇಲ್ಲ, ರಾಧು ಆತನನ್ನು ಕೈವಸ್ತ್ರದಿಂದ ಹೊಡೆದಳು" ಎಂದರು. ತಕ್ಷಣ ಶ್ರೀಮಾತೆಯವರು, "ರಾಧು, ಹಾಗಾದರೆ ತಪ್ಪು ನಿನ್ನದೇ" ಎನ್ನುತ್ತಾ "ನಾನು ಶ್ರೀರಾಮಕೃಷ್ಣರೊಂದಿಗೆ ಎಂದೂ ಜಗಳವಾಡಲಿಲ್ಲ" ಎಂದು ತಿಳಿಸುತ್ತಾರೆ. ಅವರ ಪ್ರೀತಿ ಶ್ರೀರಾಮಕೃಷ್ಣರೊಂದಿಗೆ ಎಷ್ಟೊಂದು ಆಳವಾಗಿ, ನಿಃಸ್ವಾರ್ಥವಾಗಿತ್ತೆಂದರೆ ಅದರಲ್ಲಿ ಏನನ್ನೂ ಹಿಂದೆ ಪಡೆಯುವ ನಿರೀಕ್ಷಣೆಯ ಭಾವವಿರಲಿಲ್ಲ. ಕೇವಲ ಕೊಡುವುದರಲ್ಲೇ ತೃಪ್ತಿ. ಇಂತಹ ಆದರ್ಶ ಪ್ರೇಮ ಸಾಧಾರಣ ಮಾನವರಲ್ಲಿ ಒಂದಂಶವಿದ್ದರೂ ಅವರ ಜೀವನ ಅತ್ಯಂತ ಶಾಂತಿ ಸಮಾಧಾನಗಳಿಂದ ತುಂಬಿ ಹೋಗುತ್ತದೆ.

> ಆಹಾ! ಎಂಥ ಸೌಜನ್ಯದಿಂದ ಶ್ರೀರಾಮಕೃಷ್ಣರು ನನ್ನನ್ನು ನೋಡಿಕೊಂಡರು! ಒಂದು ದಿನವೂ ಕೂಡ ನನ್ನ ಮನಸ್ಸನ್ನು ನೋಯಿಸುವ ಒಂದು ಶಬ್ದವನ್ನೂ ಉಚ್ಚರಿಸಲಿಲ್ಲ.
>
> —ಶ್ರೀಶಾರದಾದೇವಿ

ಹೀಗಿದ್ದರೂ ಶ್ರೀಮಾತೆಯವರು ಸ್ವತಂತ್ರ ಮನೋಭಾವದವರಾಗಿದ್ದರು. ದಕ್ಷಿಣೇಶ್ವರದಲ್ಲಿದ್ದಾಗ ಶ್ರೀಮಾತೆಯವರು ಹಿಂದೆ ಅನೈತಿಕ ಜೀವನ ನಡೆಸಿ ಈಗ ಧಾರ್ಮಿಕಳಾಗಿದ್ದ ಓರ್ವ ಸ್ತ್ರೀಯ ಸಹವಾಸ ಮಾಡಿದ್ದನ್ನು ಕಂಡು ಶ್ರೀರಾಮಕೃಷ್ಣರು ಆಕ್ಷೇಪಣೆ ಮಾಡಿದರು. ಆದರೆ ಶ್ರೀಮಾತೆಯವರು ಈಗ ಆಕೆ ಉತ್ತಮಳಾಗಿದ್ದಾಳೆ ಎಂದು ಹೇಳಿ, ತಮ್ಮ ಸ್ನೇಹವನ್ನು ಬಿಡಲಿಲ್ಲ. ಬಾಬುರಾಮರಿಗೆ ಹೆಚ್ಚಿನ ಚಪಾತಿ ಕೊಡುವ ವಿಚಾರದಲ್ಲಿ ಶ್ರೀರಾಮಕೃಷ್ಣರು ಆಕ್ಷೇಪಣೆ ಮಾಡಿದಾಗಲೂ ಶ್ರೀಮಾತೆಯವರು ಮಕ್ಕಳ ಊಟದ ವಿಚಾರವಾಗಿ ಸ್ವತಂತ್ರ ಮನೋಭಾವ ಉಳ್ಳವರಾಗಿದ್ದರು. ಒಮ್ಮೆ ಗೋಪಾಲನ ತಾಯಿ ಬಲರಾಮ ಬಸುಗಳ ಮನೆಯಿಂದ ಕೆಲವು ವಸ್ತುಗಳನ್ನು ಉಡುಗೊರೆಯಾಗಿ ಪಡೆದುದಕ್ಕಾಗಿ ಶ್ರೀರಾಮಕೃಷ್ಣರು ಆಕೆಯನ್ನು ಮೃದುವಾಗಿ ಬೈದು ತ್ಯಾಗವೇ ಶ್ರೇಷ್ಠವೆನ್ನುತ್ತಾರೆ. ಆದರೆ ಶ್ರೀಮಾತೆಯವರು ಆಕೆಯನ್ನು ಸಮಾಧಾನಪಡಿಸಿ, "ನಿನಗೆ ಅವಶ್ಯಕತೆ ಇರುವುದರಿಂದ ಆ ವಸ್ತುಗಳನ್ನು ನೀನು ಇಟ್ಟುಕೊ" ಎನ್ನುತ್ತಾರೆ. ಮಾತೃತ್ವದ ಪ್ರೇರಣೆಯಿಂದ ಭಕ್ತರು ಶ್ರೀರಾಮಕೃಷ್ಣರಿಗೆ ಏನು ತಂದುಕೊಟ್ಟರೂ ಅದನ್ನೆಲ್ಲಾ ಶ್ರೀಮಾತೆಯವರು ಎಲ್ಲರಿಗೂ ಹಂಚಿಬಿಡುತ್ತಿದ್ದರು. ಇದನ್ನು ಕಂಡು ಶ್ರೀರಾಮಕೃಷ್ಣರು ಒಮ್ಮೆ "ಹೀಗೆ ಮಾಡಿದರೆ ಸಂಸಾರ ನಡೆಯುವುದು ಹೇಗೆ?" ಎಂದರು. ಶ್ರೀಮಾತೆಯವರು ಏನೂ ಮಾತನಾಡದೆ ಅಲ್ಲಿಂದ ಹೊರಟು ಹೋಗುತ್ತಾರೆ. ಇದರಿಂದ ವಿಚಲಿತರಾದ ಶ್ರೀರಾಮಕೃಷ್ಣರು "ರಾಮಲಾಲಾ ಹೋಗಪ್ಪಾ, ಆಕೆಯನ್ನು ಸಮಾಧಾನ ಮಾಡು," ಎನ್ನುತ್ತಾರೆ.

### ಶ್ರೀರಾಮಕೃಷ್ಣರಲ್ಲಿ ಶ್ರೀಮಾತೆಯವರ ಭಕ್ತಿ

ಶ್ರೀಮಾತೆಯವರು ಜಾನಕೀ ಮಾತೆಯಂತೆ ಪತಿಯನ್ನು ಪರದೈವವೆಂದು ತಿಳಿದ ಪತಿವ್ರತಾ ಶಿರೋಮಣಿಯಾಗಿದ್ದರು. ಶ್ರೀರಾಧಾರಾಣಿಯಂತೆ ಅಹೇತುಕ ಪ್ರೇಮದಿಂದ ತುಂಬಿ ಶ್ರೀರಾಮಕೃಷ್ಣರ ಜೀವಿತಕಾಲದಲ್ಲಿ ಹಾಗೂ ಅವರ ಮಹಾಸಮಾಧಿಯ ಬಳಿಕವೂ ಮಹಾಭಾವದಲ್ಲಿ ನಿಂತು ಶ್ರೀರಾಮಕೃಷ್ಣರಿಗಾಗಿ ಪ್ರೇಮಾಶ್ರುಧಾರೆ ಹರಿಸಿದವರಾಗಿದ್ದರು. ಸಾಧ್ವಿ ಸತಿ ವಿಷ್ಣುಪ್ರಿಯೆಯಂತೆ ಕಠೋರ ತಪಸ್ವಿನಿಯಾಗಿ ತಮ್ಮ ಪತಿಯನ್ನು ದೈವವೆಂದು ಪೂಜಿಸಿದವರಲ್ಲಿ ಪ್ರಪ್ರಥಮರಾಗಿದ್ದರು. ಬುದ್ಧದೇವನ ಸಹಧರ್ಮಿಣಿ ಯಶೋಧರೆ ಆತನ ಧರ್ಮವನ್ನು ಅನುಸರಿಸಿ ಭಿಕ್ಷುಣಿಯಾದಂತೆ, ಬಾಹ್ಯಸಂನ್ಯಾಸ ಸ್ವೀಕರಿಸದಿದ್ದರೂ ಶ್ರೀರಾಮಕೃಷ್ಣರ ಆದರ್ಶವನ್ನು ಪೂರ್ಣವಾಗಿ ಸ್ವೀಕರಿಸಿ ಪರಿಪೂರ್ಣ ಸಂನ್ಯಾಸಿನಿಯ ಜೀವನ ನಡೆಸಿದರು. ಎಲ್ಲಕ್ಕೂ ಹೆಚ್ಚಾಗಿ ಶ್ರೀರಾಮಕೃಷ್ಣರ ಅಣತಿಯಂತೆ ಇಡೀ ಚರಾಚರ ಜಗತ್ತಿಗೇ ಮಾತೃಪ್ರೇಮ ಹರಿಸಿದ ಮಹಾಮಾತೃಭಾವ ಸಂಪನ್ನರಾದ ಮಾತೃಮೂರ್ತಿಯಾಗಿದ್ದರು.

ಶ್ರೀಮಾತೆಯವರಿಗೆ ಶ್ರೀರಾಮಕೃಷ್ಣರಲ್ಲಿ ಭಕ್ತಿ ಪ್ರೇಮ ಎಷ್ಟೊಂದು ಆಳವೂ ವಿಸ್ತಾರವೂ ಆಗಿತ್ತೆಂದರೆ ಅದರಿಂದಾಗಿ ಅವರು ಎಲ್ಲೆಲ್ಲೂ ಶ್ರೀರಾಮಕೃಷ್ಣರನ್ನೇ ಕಾಣುತ್ತಿದ್ದರು. ಒಮ್ಮೆ ಭಕ್ತರೊಬ್ಬರು ಶ್ರೀಮಾತೆ ಹಾಗೂ ಶ್ರೀರಾಮಕೃಷ್ಣರ ಭಾವಚಿತ್ರಗಳನ್ನು ಮಾತೆಯವರಿಗೆ ಕೊಟ್ಟು, ಆಶೀರ್ವದಿಸಿ ಕೊಡಲು ಬೇಡಿದಾಗ ಶ್ರೀಮಾತೆಯವರು ಶ್ರೀರಾಮಕೃಷ್ಣರ ಭಾವಚಿತ್ರವನ್ನು ತಲೆಗೆ ತಾಕಿಸಿ ನಮಿಸಿದರು. ನಂತರ ತಮ್ಮ ಭಾವಚಿತ್ರವನ್ನೂ ಅದೇ ರೀತಿ ಮಾಡಲು ಆ ಭಕ್ತ ನಗುತ್ತಾ, "ಅಮ್ಮಾ, ಅದಾರ ಭಾವಚಿತ್ರ?" ಎಂದಾಗ ಮಾತೆಯವರು "ಅದೇಕೆ, ಅದು ನನ್ನ ಭಾವಚಿತ್ರ. ಆದರೆ ನಾನು ಅದರಲ್ಲೂ ಶ್ರೀರಾಮಕೃಷ್ಣರನ್ನೇ ಕಾಣುತ್ತಿದ್ದೇನೆ" ಎಂದರು. ಜಯರಾಂಬಾಟಿಯಲ್ಲಿ ಶ್ರೀಮಾತೆಯವರು ನೆಲೆಸಿದ್ದಾಗ ಬೆಳಗಿನ ಜಾವ ಪೂಜೆ ಮಾಡಿ

ಶ್ರೀರಾಮಕೃಷ್ಣರಿಗೆ ನೈವೇದ್ಯ ನೀಡುತ್ತಿದ್ದರು. ಒಂದು ದಿನ ಓರ್ವ ಚಪಲ ಚಿತ್ತದ ಬಾಲಕ ಆ ನೈವೇದ್ಯದ ಕಡೆಗೇ ಆಸೆಯಿಂದ ನೋಡುತ್ತಿರಲು ಮಾತೆಯವರು ಅದನ್ನು ಶ್ರೀರಾಮಕೃಷ್ಣರಿಗೆ ನೈವೇದ್ಯ ಮಾಡುವ ಮೊದಲೇ ಆ ಬಾಲಕನಿಗೆ ಅದನ್ನು ತಿನ್ನಲು ಕೊಟ್ಟಿದ್ದನ್ನು ನೋಡಿ ಸೇವಕ ಬ್ರಹ್ಮಚಾರಿಗಳು "ಅಮ್ಮಾ, ಅದೇನು ಮಾಡುತ್ತಿರುವಿರಿ?" ಎಂದಾಗ, "ಏಕೆ, ಆ ಬಾಲಕನಲ್ಲೂ ಶ್ರೀರಾಮಕೃಷ್ಣರೇ ಇದ್ದಾರೆ" ಎಂದರು. ಇದೇ ರೀತಿ ನೈವೇದ್ಯಕ್ಕಾಗಿ ಮಾಡಿದ ಹಲ್ವಾವನ್ನು 'ಅಮ್ಮಾ' ಎಂದು ಕರೆದ ತಮ್ಮ ಸಾಕಿದ ಅರಗಿಳಿ ಗಂಗಾರಾಮನ ಮುಂದೆ ಶ್ರೀಮಾತೆಯವರು ಇಟ್ಟಿದ್ದನ್ನು ಕಂಡು ಸೇವಕ ಬ್ರಹ್ಮಚಾರಿಗಳು ಆಶ್ಚರ್ಯವನ್ನು ವ್ಯಕ್ತಪಡಿಸಿದಾಗ, "ಏಕೆ, ಗಿಳಿಯಲ್ಲೂ ಶ್ರೀರಾಮಕೃಷ್ಣರೇ ಇದ್ದಾರೆ " ಎನ್ನುತ್ತಾರೆ. ಇನ್ನೊಮ್ಮೆ ನೈವೇದ್ಯ ನೀಡುವ ಮುನ್ನ ಹಾಲಿನ ಬಟ್ಟಲನ್ನು ಆ ಸೇವಕ ಬ್ರಹ್ಮಚಾರಿಗಳಿಗೇ ಕೊಟ್ಟು ಅವರಿಗೆ ಕುಡಿಯಲು ಹೇಳಿದಾಗಲೂ ಹೌಹಾರಿದ ಬ್ರಹ್ಮಚಾರಿಗಳು, "ಅಮ್ಮಾ, ಇದೇನಿದು? ಹೀಗೆ ಮಾಡುವುದು ಉಚಿತವೇ?" ಎಂದು ಕೇಳಿದಾಗ "ಕುಡಿಯಪ್ಪಾ, ನಿನ್ನಲ್ಲೂ ಶ್ರೀರಾಮಕೃಷ್ಣರನ್ನೇ ಕಾಣುತ್ತಿದ್ದೇನೆ" ಎನ್ನುತ್ತಾರೆ.

ಶ್ರೀರಾಮಕೃಷ್ಣರನ್ನು ಎಲ್ಲೆಲ್ಲೂ ಕಾಣುವುದು ಮಾತ್ರವಲ್ಲದೆ, ಶ್ರೀಮಾತೆಯವರು ಅವರೊಡನೆ ಪೂರ್ಣ ತಾದಾತ್ಮ್ಯವನ್ನೂ ಹೊಂದಿದ್ದರು. ಕೆಲವೊಮ್ಮೆ ಶ್ರೀರಾಮಕೃಷ್ಣರಂತೆಯೇ ವರ್ತಿಸುತ್ತಿದ್ದರು. ಅವರು ಬೃಂದಾವನದಲ್ಲಿದ್ದಾಗ ನಡೆದ ಘಟನೆ ಈ ಸಂದರ್ಭದಲ್ಲಿ ಪ್ರಸ್ತುತ. ಒಂದು ದಿನ ಶ್ರೀರಾಮಕೃಷ್ಣರ ಚಿಂತನೆಯಲ್ಲಿ ಮಗ್ನರಾಗಿದ್ದಾಗ ಗಾಢಸಮಾಧಿಗೆ ಹೋಗಿಬಿಟ್ಟರು. ಯೋಗೀನ್ ಮಾ ಎಷ್ಟೇ ಭಗವನ್ನಾಮವನ್ನು ಅವರ ಕಿವಿಯಲ್ಲಿ ಉಚ್ಚರಿಸಿದರೂ ಅವರನ್ನು ಎಬ್ಬಿಸಲಾಗಲಿಲ್ಲ. ಕೊನೆಗೆ ಸ್ವಾಮಿ ಯೋಗಾನಂದರು ಬಂದು ಪ್ರಯತ್ನಿಸಿದಾಗ ಮೆಲ್ಲನೆ ಸಮಾಧಿಯಿಂದ ಕೆಳಗಿಳಿದರು. ಶ್ರೀರಾಮಕೃಷ್ಣರು ಸಮಾಧಿಯಿಂದ ಇಳಿದ ಮೇಲೆ ಏನಾದರೂ ತಿನ್ನಲು ಕೇಳುತ್ತಿದ್ದಂತೆಯೇ ಅವರೂ ಕೇಳಿದರು. ಹಾಗೆಯೇ ಅವರು ತಿನ್ನುತ್ತಿದ್ದ ರೀತಿಯಲ್ಲಿಯೇ ಶ್ರೀಮಾತೆಯವರೂ, ತಂದ ಆಹಾರವನ್ನು ತಿಂದರು. ಆ ಸಂದರ್ಭದಲ್ಲಿ ಸ್ವಾಮಿ ಯೋಗಾನಂದರು ಕೇಳಿದ ಕೆಲವು ಪ್ರಶ್ನೆಗಳಿಗೆ ಶ್ರೀರಾಮಕೃಷ್ಣರ ರೀತಿಯಲ್ಲಿಯೇ ಉತ್ತರ ನೀಡಿದುದನ್ನು ಕೇಳಿ ಎಲ್ಲರಿಗೂ ಆಶ್ಚರ್ಯವಾಯಿತು. ಅವರ ಎಲ್ಲ ಹಾವ-ಭಾವಗಳೂ ಶ್ರೀರಾಮಕೃಷ್ಣರಂತೆಯೇ ಇದ್ದುವು. ಆ ಸಮಯದಲ್ಲಿ ತಮಗೆ ಶ್ರೀರಾಮಕೃಷ್ಣರ ಆವೇಶವಾಗಿತ್ತೆಂದು ಅವರೇ ಅನಂತರ ಸಾಮಾನ್ಯ ಸ್ಥಿತಿಗೆ ಬಂದಮೇಲೆ ಒಪ್ಪಿಕೊಂಡರು.

ಶ್ರೀರಾಮಕೃಷ್ಣರ ಕೃಪೆ ಜಗತ್‌ಕಲ್ಯಾಣಕ್ಕಾಗಿ ಹರಿದು ಬಂದಿತು ಶ್ರೀಶಾರದಾದೇವಿಯವರ ಮಾತೃತ್ವದ ಮಾಧ್ಯಮದಿಂದ. ಸೋದರಿ ನಿವೇದಿತಾ ಬರೆಯುತ್ತಾರೆ : "ಜಗತ್ತಿನ ಬಗೆಗೆ ಶ್ರೀರಾಮಕೃಷ್ಣರಿಗೆ ಎಷ್ಟೊಂದು ಪ್ರೀತಿಯಿತ್ತೊ ಅದನ್ನೆಲ್ಲಾ ಒಂದು ಪಾತ್ರೆಯಲ್ಲಿ ತುಂಬಿ ಒಂದು ಮಧುರ ಸ್ಮೃತಿಯಾಗಿ ಮುಂದಿನ ಜನಾಂಗಕ್ಕಾಗಿ ಇಟ್ಟುಹೋದರು. ಆ ಪಾತ್ರೆಯೇ ಶ್ರೀಮಾತೆ ಶಾರದಾದೇವಿಯವರು—ಶ್ರೀರಾಮಕೃಷ್ಣರ ವಿಶ್ವಪ್ರೇಮವನ್ನು ಧರಿಸಿದಂತಹ ಅಮೃತಕಳಶ."

ಪವಿತ್ರಗಂಗಾವಾರಿ, ಭುವಿಗಿಳಿದು ಶಿವನ ಜಟೆಯಲ್ಲಿ ನಿಂತು ತಪೋಜಲವಾಯಿತು. ಅದೇ ಪವಿತ್ರ ಗಂಗೆ ಶಿವನ ಜಟೆಯಿಂದ ಕೆಳಗಿಳಿದು ಸಗರ ಪುತ್ರರ ಭಸ್ಮರಾಶಿಯನ್ನು ತೋಯಿಸಿ ಉದ್ಧರಿಸಿದ ಮಾತೃಪ್ರೇಮದ ಸ್ರೋತವಾಯಿತು. ಆ ತಪೋಜಲ ಶ್ರೀರಾಮಕೃಷ್ಣರಾದರೆ, ಆ ಮಾತೃಪ್ರೇಮದ ಸ್ರೋತವೇ ಶ್ರೀಮಾತೆ ಶಾರದಾದೇವಿಯವರು. ಅವತಾರಪುರುಷರು ಧರೆಗಿಳಿದು ಬಂದಾಗ ಸಹಸ್ರಾರು ಸೂರ್ಯರು ಉದಯಿಸಿದಂತೆ ಇರುತ್ತಾರೆ. ಎಲ್ಲರಿಗೂ ಈ ಬೆಳಕನ್ನು ಥಟ್ಟನೆ ತಿಳಿಯಲು ಸಾಧ್ಯವಿಲ್ಲ. ಆ ದಿವ್ಯಮಹಿಮೆ ಸಾವಧಾನವಾಗಿ ಬೆಳಕಿಗೆ ಬರುವುದು. ಬಹುಭಾವದಲ್ಲಿ, ಬಹುಜನರ ಸಾಧನೆಯಲ್ಲಿ ಮತ್ತು ಸಿದ್ಧಿಯಲ್ಲಿ ಅವರ ದಿವ್ಯಮಹಿಮೆ ಬೆಳಗುವುದು. ಇಂತಹ ಅವತಾರವರಿಷ್ಠರಾದ ಶಾರದಾ-ರಾಮಕೃಷ್ಣರ ಚರಣದಲ್ಲಿ ನಮಿಸುವ ಸೌಭಾಗ್ಯ ನಮ್ಮದಾಗಿದೆಯೆಂದು ಹರ್ಷಿಸೋಣ. ❖

ಋಷಿ ಯಾಜ್ಞವಲ್ಕ್ಯರು ಸಂನ್ಯಾಸ ಸ್ವೀಕರಿಸುವುದಕ್ಕೆ ಮುಂಚೆ ತಮ್ಮ ಆಸ್ತಿಯನ್ನು ತಮ್ಮ ಇಬ್ಬರು ಪತ್ನಿಯರಾದ ಕಾತ್ಯಾಯನಿ ಮತ್ತು ಮೈತ್ರೇಯಿಯರಿಗೆ ಹಂಚುತ್ತಾರೆ. "ಈ ಸಂಪತ್ತಿನಿಂದ ಅಮೃತತ್ವ ದೊರೆಯುವುದೆ?" ಎಂದು ಆಧ್ಯಾತ್ಮಿಕ ಪ್ರವೃತ್ತಿಯುಳ್ಳ ಮೈತ್ರೇಯಿ ಕೇಳುತ್ತಾಳೆ. ಯಾಜ್ಞವಲ್ಕ್ಯರು 'ಇಲ್ಲ' ಎಂದು ಹೇಳಿ ಆಕೆಯನ್ನು ತಮ್ಮ ಪ್ರಥಮ ಶಿಷ್ಯೆಯನ್ನಾಗಿ ಸ್ವೀಕರಿಸಿ ಆಕೆಗೆ ಆತ್ಮವಿದ್ಯೆಯನ್ನು ನೀಡುತ್ತಾರೆ. ಈ ಪ್ರಸಂಗವನ್ನು ಉಲ್ಲೇಖಿಸುತ್ತ ಶ್ರೀಶಂಕರಾಚಾರ್ಯರ ಪ್ರಧಾನ ಶಿಷ್ಯರಾದ ಸುರೇಶ್ವರರು ಯಾಜ್ಞವಲ್ಕ್ಯರ ಬಾಯಿಂದ ಈ ಕೆಳಗಿನ ಮಾತನ್ನು ಹೇಳಿಸುತ್ತಾರೆ:

ಅತಿಸ್ನೇಹಾಪಕೃಷ್ಟೋಮಾ ದೇಹಾರ್ಧಂ ಶೂಲಿನಃ ಶ್ರಿತಾ ।<br>
ತ್ವಂ ತು ಸರ್ವಾತ್ಮನಾತ್ಮಾನಂ ಕೃತ್ಸ್ನಂ ಮಾಮಾಪ್ತುಮಿಚ್ಛಸಿ ॥

"ಪಾರ್ವತಿಯು ತನ್ನ ಪ್ರೀತ್ಯಾಧಿಕ್ಯದಿಂದ ಶಿವನ ಅರ್ಧದೇಹವನ್ನು ಆಕ್ರಮಿಸಿದಳು. ಆದರೆ ನೀನು (ಮೈತ್ರೇಯಿ) ನನ್ನ ಇಡೀ ವ್ಯಕ್ತಿತ್ವವನ್ನು ಆವರಿಸಲು ಇಷ್ಟಪಡುತ್ತೀಯೆ." ತಾವು ಆಸೆ ಪಡದಿದ್ದರೂ, ಆಸೆ ಪಡುವ ಆವಶ್ಯಕತೆ ಇಲ್ಲದಿದ್ದರೂ ಶ್ರೀಮಾತೆಯವರು ಶ್ರೀರಾಮಕೃಷ್ಣರ ಪೂರ್ಣ ವ್ಯಕ್ತಿತ್ವವನ್ನು ಆವರಿಸಿಕೊಂಡುಬಿಟ್ಟರು. *—ಟಿ.ಎಂ.ಪಿ. ಮಹಾದೇವನ್*